ಫೀಜಿಬಿಲಿಟಿಸಿ ಮಂತ್ರಿ ನಕ್ಷೆ ತಯಾರಿಂ ಮಾಡಿ ಕಳಿಸಿಕೊಟ್ಟಿರುವವರು. ಆದರೆ ಅದ
ಬರಲಿಲ್ಲ. ಮತ್ತು ಸರಕಾರಕ್ಕೂ ಕಳುಹಿಸಿಕೊಡಲಿಲ್ಲ. ರೈತರ ಒತ್ತಡದ ಮೇ
ನೀರಾವರಿ ಮಂತ್ರಿಗಳು ಭದ್ರಾ ಪ್ರಾಜೆಕ್ಟ್‌ಗೆ ಬಂದಾಗ ಭದ್ರಾ ಮೇಳುಗಡೆಯಿಂದ ಬಂ
ನೀರಾದರೂ ಕೊಡಬೇಕೆಂದು ತಿಳಿಸಿದ್ದರ ಮೇರೆಗೆ ಅಧಿಕಾರಿಗಳು ೩೬ ಲಕ್ಷಕ್ಕೆ ನಿಗದಿ
ಅಭಿಯಂತರರು, ನೀರಾವರಿ ಇವರಿಗೆ ಕಳುಹಿಸಿಕೊಟ್ಟಿದ್ದರಂ. ಅವರು ತಾರೀಖು ೧೩-
ಅಧಿಕಾರಿಗಳು ಕಳಿಸಿದ ರಿಪೋರ್ಟ್ ಮತ್ತು ಕಡತವನ್ನು ತಮ್ಮ ಕಛೇರಿಯಲ್ಲಿ ಇಟ್ಟು
ಎಸ್ಟಿಮೇಟ್ ಮಾಡಿದ ಒಂದು ರಿಪೋರ್ಟನ್ನು ಕಳಿಸಿರುತ್ತಾರೆ. ಕಡತ ತರಿಸಿ
ಆಗಿರುವ ತೊಂದರೆಯನ್ನು ಅರ್ಥಮಾಡಿಕೊಳ್ಳಬಹುದು. ಕೇವಲ ೪ ಮೈಲಿ ಸೀಳ
ತೆಗೆದಲ್ಲಿ ೫೦೦ ಒಡ ಕುಟುಂಬದವರಿಗೆ ಉಪಯೋಗವಾಗುವುದಿಲ್ಲವೇ ? ೧೫೦೦
ನೀರುಣಿಸುವ ಹಾಗಾಗುತ್ತದೆ. ಮತ್ತು ಇದರಿಂದ ಯಾರಿಗೂ, ಅಚ್ಚುಕಟ್ಟುದಾ
ಯಾಗುವುದಿಲ್ಲ. ಆದ್ದರಿಂದ ಮಾನ್ಯ ನೀರಾವರಿ ಮಂತ್ರಿಗಳಿಗೆ ಇದನ್ನು ತಿಳಿಯಪಡಿ

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ತರಿಸಿಕೆ

೧–೦೫ ಪಿ. ಎಂ.

ಶ್ರೀ ಪಟೆಮಕ್ಕಿ ರತ್ನಾಕರ್.—ಈ ೩೩೪ನ್ನು ಬಂದ್ ಮಾಡಿ, ನಾವು ಪ್ರಶ್ನೆ ಕೆ
ಪಟ್ಟ ಮಂತ್ರಿಗಳು ಇಲ್ಲಿ ಇರುವುದಿಲ್ಲ, ನಮಗೆ ಬರಬೇಕಾದ ಉತ್ತರವೂ ಬರುವುದಿಲ್ಲ.
ನಮಗೂ ಜವಾಬ್ದಾರಿ ಇದೆ. ಈ ೩೩೪ ಬೇಡ, ಇದನ್ನು ರದ್ದು ಮಾಡಿ.

(ಮಾನ್ಯ ಸದಸ್ಯರು ಕೊಟ್ಟಿದ್ದ ೩೩೪ರ ನೋಟೀಸನ್ನು ಹರಿದು ಹಾಕಿ

ಅಧ್ಯಕ್ಷರು.—ಮಾನ್ಯ ರತ್ನಾಕರ್ ಅವರೇ ತಾವು ಕುಳಿತುಕೊಳ್ಳಿ, ಈ ತರಹ
ಹೇಗೆ ? ಇದಕ್ಕಾಗಿಯೇ ಆಷ್ಯೂರೆನ್ಸ್ ಕಮಿಟಿ ಇದೆ, ಅದಕ್ಕೆ ಚೇರ್ಮನ್ ಇದ್ದಾ
ಸೇರುತ್ತಾರೆ, ಎಲ್ಲವನ್ನೂ ಡಿಸ್‌ಕಸ್ ಮಾಡುತ್ತಾರೆ. ನಿಮ್ಮಲ್ಲೂ ಸದಸ್ಯರಿರುತ್ತಾ
ಡಿಸ್‌ಕಸ್ ಮಾಡಿ. ಇದನ್ನು ಬ್ಯಾಲೆಟ್ ಹಾಕಿ ೫ ಮಾತ್ರ ತೆಗೆದುಕೊಳ್ಳಬೇಕು. ಎ
ಅನುಕೂಲವಾಗಲಿ ಎಂದು ಈ ರೀತಿ ಮಾಡುತ್ತಿದ್ದೇವೆ. ನೀವು ಅಸೆಂಬ್ಲಿಗೆ ಕಾಗದ
ಬಂದಿದ್ದೀರಾ ? ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ೩೩೪ಕ್ಕೆ ಈಗಲೇ ಮಂತ್ರಿಗಳು ಉತ್ತರ
ತಾವು ದಯವಿಟ್ಟು ಕುಳಿತುಕೊಳ್ಳಿ. ೩೩೪ರ ಪ್ರಕಾರ ಸರ್ಕಾರದ ಗಮನ ಸೆಳೆಯುವುದ
ವಟ್ಟಿಗೆ ಸರ್ಕಾರ ಉತ್ತರ ಕೊಡಬೇಕು. ನೀವು ಇದನ್ನು ಅರ್ಥ ಮಾಡಿಕೊಳ್ಳಬೇ
ಪಕ್ಷದವರಿಗೂ, ಸರ್ಕಾರಕ್ಕೂ ಒಂದು ತಿಳುವಳಿಕೆ ಪ್ರಕಾರ ಇದು ನಡೆದುಕೊಂಡು ಬ
೩೩೪ರ ನಿಯಮದ ಪ್ರಕಾರ ಕೇಳಿರತಕ್ಕ ಅನೇಕ ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೆ
ನೋಟೀಸಿಗೂ ಉತ್ತರ ಕೊಡಿಸುತ್ತೇವೆ.

(೪) ಬೆಂಗಳೂರಿನ ಮಿನರ್ವ ಗಿರಣಿಯಲ್ಲಿ ಪರಿಸ್ಥಿತಿ ವಿರೋಪಕ್ಕೆ ಹೊ

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಅಧ್ಯಕ್ಷರೇ,
ಬೆಂಗಳೂರಿನಲ್ಲಿರುವ ಎಲ್. ವಿ. ಸಿ. ನಿಗಮದ ಗುಂಪಿಗೆ ಸೇರಿದ ಮಿನರ್ವ ಗಿರಣಿ
ಮ್ಯಾನೇಜರರು, ಕೆಲವು ಕೆಲಸಗಾರರು. ಆವರ ಮೇಲೆ ಹಲ್ಲೆ ಮಾಡಲೆತ್ನಿಸಿದರೆಂದ
ಗುಂಡು ಹಾರಿಸಲಾಯಿತೆಂದೂ, ಹಲವು ನೌಕರರು ಪೋಲೀಸರ ಆಕ್ರಮ್ಯದಲ್ಲಿ ಇರ
ಗಳಲ್ಲಿ ಪರದಿಯಾಗಿದೆ. ಇದಕ್ಕೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇತ್ತೀಚೆಗೆ ತನ್ನ
ಮಿನರ್ವ ಮಿಲ್‌ನ್ನು ಮುಚ್ಚುವುದಾಗಿ ಸಾರಿದ್ದು, ಇದರಿಂದ ಸಹಸ್ರಾರ್ಕೂ ಹೆಚ್ಚು
ಪಾಲಾಗಿದ್ದಾರೆ. ಈ ಸ್ಥಿತಿ ಗಂಭೀರವಾಗಿದ್ದು, ಸರ್ಕಾರ ಕೊಡಲೇ ಕೇಂದ್ರ ಸರ್ಕಾ
ಪುನರಾಲೋಚನೆ ಮಾಡುವಂತೆ ಗಮನ ಸೆಳೆಯಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಗೃಹ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ತಾರೀಖು 15-3-87ರ ರಂದು ಗಂಟೆ ಸುಮಾರಿಗೆ ಶ್ರೀಯುತರಾದ ಚಂದ್ರಶೇಖರ, ಅಂಜನಪ್ಪ ಮತ್ತು ತ್ರಿಮೂರ್ತಿ, ಈ ಮೂವರು ಕಾರ್ಮಿಕರನ್ನು ಫ್ಯಾಕ್ಟರಿಯ ಒಳಗೆ ಹೋಗದ ರೀತಿ ಸೆಕ್ಯೂರಿಟಿಯವರು ತಡೆದರು. ಕಾರಣ ಕೇಳಿದಾಗ ಈ ಮೂವರನ್ನು ಮಾಲೀಕರು ಅವಮಾನಿತ್ತು ನಲ್ಲಿಟ್ಟಿರುವುದೇ ಎಂದು ಗೊತ್ತಾಯಿತು. ಸೆಕ್ಯೂರಿಟಿಯವರು ಈ ಕಾರ್ಮಿಕರಿಗೆ ಪರ್ಸನಲ್ ಆಫೀಸರಿಂದ ಪರವಾನಗಿ ಪಡೆದಲ್ಲಿ ಒಳಗೆ ಬಿಡುವೆನೆಂದರು.

ತಕ್ಷಣವೇ ಈ ಕಾರ್ಮಿಕರು ಪರ್ಸನಲ್ ಆಫೀಸರ್ ಶ್ರೀ ಎ. ಎಂ. ಪಾಟೀಲರ ಬಳಿ ಹೋಗಿ ವಿಚಾರವೇನು ಎಂದು ಕೇಳಿದಾಗ, ನಡೆದ ಮಾತುಕತೆ, ಚಕಮಕಿ ಹಾಗೂ ತದನಂತರ ಘರ್ಷಣೆಯಲ್ಲಿ ಪರ್ಸನಲ್ ಆಫೀಸರ್ ತನ್ನ ರಿವಾಲ್ವರ್ ತೆಗೆದು ಗುಂಡು ಹೊಡೆದರೆಂದು ಗೊತ್ತಾಗಿದೆ. ಆಗ ಒಬ್ಬನ ಬಲತೋಳಿಗೆ ಗಾಯವಾಯಿತು, ಇದಿಷ್ಟು ತಿಳಿದು ಬಂದ ಸಂಗತಿ.

ಈ ಬಗ್ಗೆ ಈಗಾಗಲೇ ಲೇಬರ್ ಕಮೀಷನರ್ ವಿಚಾರಣೆ ಮಾಡುತ್ತಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ.

(ಜ) ಹಾನಗಲ್ ತಾಲ್ಲೂಕು ಮತ್ತು ನವಲಗುಂದ ತಾಲ್ಲೂಕುಗಳಲ್ಲಿ ಸಂಚಾರಿ ಪಶು ವೈದ್ಯ ಶಾಲೆಗಳಿಗೆ ವೈದ್ಯರನ್ನು ನೇಮಿಸುವುದು

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕ್ ಹಾಗೂ ನವಲಗುಂದ್ ತಾಲ್ಲೂಕುಗಳಲ್ಲಿ ಸಂಚಾರಿ ಪಶು ಚಿಕಿತ್ಸಾಲಯಗಳಿದ್ದು, ಆ ಸಂಚಾರಿ ಆಸ್ಪತ್ರೆಯ ವೈದ್ಯರ ನೇಮಕಾತಿಯಾಗದೆ ಇರುವುದರಿಂದ, ಈಗ ಸದ್ಯ ಅಲ್ಲಿ ಕೆಲಸ ಮಾಡುತ್ತಿರುವ ಅಲ್ಲಿಯ ಸ್ಥಳೀಯ ವೈದ್ಯರು ಸಂಚಾರಿ ಆಸ್ಪತ್ರೆಗೆ ಕೆಲಸಕ್ಕೆ ಹೋಗಬೇಕಾಗುವುದರಿಂದ, ವಾರದಲ್ಲಿ ಮೂರು ದಿನ ಆಸ್ಪತ್ರೆಗಳಲ್ಲಿಯೇ ಕೆಲಸ ಮಾಡಲು ಅನಾನುಕೂಲವಾಗಿರುತ್ತದೆ. ಹಾಗೂ ರೈತರಿಗೆ ಇದರಿಂದ ಬಹಳ ತೊಂದರೆಯಾಗಿರುತ್ತದೆ ಕಾರಣ ಪಶುಸಂಗೋಪನಾ ಇಲಾಖೆಯ ಸಚಿವರು ತೀವ್ರ ಗಮನಹರಿಸಿ ವೈದ್ಯರ ಸ್ಥಳ ಮಂಜೂರಾತಿ ಹಾಗೂ ವೈದ್ಯರ ನೇಮಕಾತಿ ಮಾಡುವ ಬಗ್ಗೆ ಮಾನ್ಯ ಪಶುಸಂಗೋಪನಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ನಾಗರೀಕ ಸರಬರಾಜು ಖಾತೆ ಮಂತ್ರಿಗಳು) (ಮಾನ್ಯ ಮಿನಿಸ್ಟರ್‌ರವರಿಗೆ, ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಸೂಚನೆಗೆ ಈ ಕೆಳಗಿನ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಧಾರವಾಡ ಜಿಲ್ಲೆಯ ಹಾನಗಲ್ ಹಾಗೂ ನವಲಗುಂದ ತಾಲ್ಲೂಕುಗಳಲ್ಲಿ ಸಂಚಾರಿ ಪಶುಚಿಕಿತ್ಸಾಲಯಗಳನ್ನು ಪಡೆಯಲು ರಾಜ್ಯಮಟ್ಟದ ಸಮನ್ವಯ ಸಮಿತಿಯು ದಿನಾಂಕ 23-3-87ರಲ್ಲಿ ರಂದು ನಡೆದ ಸಭೆಯಲ್ಲಿ ಅನುಮೋದನೆ ನೀಡಿತ್ತು. ಆದರನ್ವಯ ಈ ಎರಡು ತಾಲ್ಲೂಕುಗಳಿಗೂ ಸಂಚಾರಿ ಪಶು ಚಿಕಿತ್ಸಾಲಯಗಳಿಗೆ ಬೇಕಾಗುವ ವಾಹನಗಳನ್ನು ಖರೀದಿ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಆದರೆ ಪಶುವೈದ್ಯರ ಕೊರತೆಯಿಂದ ಈ ಸಂಚಾರಿ ಪಶುಚಿಕಿತ್ಸಾಲಯಗಳಿಗೆ ಅವಶ್ಯಕವಾದ ಪಶು ವೈದ್ಯರನ್ನು ನೇಮಕ ಮಾಡಿರುವುದಿಲ್ಲ. ಈಗ ಇಲಾಖೆಯಲ್ಲಿ ಹಾಲಿ 20 ಸಹಾಯಕ ಪಶುವೈದ್ಯರ ಹುದ್ದೆಗಳು ಖಾಲಿಯಿದ್ದು ಈ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗದ ಮುಖೇನ ಅವಶ್ಯ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಆದಷ್ಟು ಜಾಗ್ರತೆಯಾಗಿ ಸದರಿ ಸಂಚಾರಿ ಪಶುಚಿಕಿತ್ಸಾಲಯಗಳಿಗೆ ಅವಶ್ಯ ಹುದ್ದೆಗಳನ್ನು ಸೃಷ್ಟಿಸಿ, ಸಹಾಯಕ ಪಶುವೈದ್ಯರನ್ನು ನೇಮಿಸಲು ಜರೂರು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು.—ಡಿ.ಜಿ. ಬಸವನಗೌಡ, ಗುರುಪಾದಪ್ಪ, ವಿಕಾಂತಯ್ಯ, ಯಾರಾದರೂ ಒಬ್ಬರು ಓದಿ.